# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ.ನಾಗರಾಜು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 124
ಉತ್ತರಿಸಬೇಕಾದ ದಿನಾಂಕ : 14-02-2023
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಮಟ್ಟದಲ್ಲಿ ಜುಲೈ-2021ನೇ ಸಾಲಿನಲ್ಲಿ ಸಹಕಾರ ಇಲಾಖೆಯಲ್ಲಿ ಇನ್ನಷ್ಟು ತೀವ್ರತರವಾದ ಜನಸ್ನೇಹಿ ಯೋಜನೆಗಳನ್ನು ರೂಪಿಸಲು ರೂ.900 ಕೋಟಿ ಅನುದಾನದೊಂದಿಗೆ ನೂತನವಾಗಿ ಸಹಕಾರ ಇಲಾಖೆಯನ್ನು ಹೊಸ ಯೋಜನೆಗಳನ್ನು ರೂಪಿಸುವ ಸಲುವಾಗಿ ಸ್ಥಾಪಿಸಿರುವುದರಿಂದ ರಾಜ್ಯ ಮಟ್ಟದ ಸಹಕಾರ ಇಲಾಖೆಗಳಿಗೆ ಆದ ಅನುಕೂಲಗಳೇನು ಮತ್ತು ಹೊಸದಾಗಿ ರೂಪಿಸಿದ ಕಾರ್ಯಕ್ರಮಗಳೇನು; | ರಾಷ್ಟ್ರೀಯ ಮಟ್ಟದಲ್ಲಿ ನೂತನವಾಗಿ ಸಹಕಾರ ಇಲಾಖೆಯಲ್ಲಿ ಹೊಸ ಯೋಜನೆಗಳನ್ನು ರೂಪಿಸುವ ಸಲುವಾಗಿ ಸ್ಥಾಪಿಸಿದ್ದು, ಈ ಕೆಳಕಂಡ ಹೊಸ ಯೋಜನೆಯನ್ನು 2022-23 ರಲ್ಲಿ ರೂಪಿಸಲಾಗಿದೆ.<br>• ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಟಿಎಪಿಸಿಎಮ್‌ಎಸ್ ಗಳಲ್ಲಿ ಗೋದಾಮುಗಳನ್ನು ಸ್ಥಾಪಿಸಿ ವಿಕೇಂದ್ರೀಕೃತ ಶೇಖರಣಾ ಸಾಮರ್ಥ್ಯವನ್ನು ಸ್ಥಾಪಿಸಲು ಯೋಜಿಸಲಾಗಿದೆ. ಇದರಿಂದ, ರೈತರು ತಮ್ಮ ಉತ್ಪನ್ನಗಳನ್ನು ಸ್ಥಳೀಯವಾಗಿ ಶೇಖರಣೆ ಮಾಡಬಹುದು ಮತ್ತು ಸೂಕ್ತ ಸಮಯದಲ್ಲಿ ಮಾರಾಟ ಮಾಡಿ ಲಾಭದಾಯಕ ಬೆಲೆ ಪಡೆಯಬಹುದು.<br>• ಸರ್ಕಾರವು ಮುಂದಿನ 05 ವರ್ಷಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಲ್ಲದ ಪಂಚಾಯತ್ ವ್ಯಾಪ್ತಿಯಲ್ಲಿ ಮತ್ತು ಗ್ರಾಮಗಳಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ವಿವಿದೋದ್ದೇಶ ಸಹಕಾರ ಸಂಘಗಳನ್ನು, ಪ್ರಾಥಮಿಕ ಮೀನುಗಾರರ ಸಹಕಾರ ಸಂಘಗಳನ್ನು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲು ಎಲ್ಲಾ ಅನುಕೂಲಗಳನ್ನು ಒದಗಿಸುತ್ತದೆ.<br>• ಪ್ಯಾಕ್ಸ್ (PACS) ಗಳನ್ನು ಬಹು ಉಪಯೋಗಿ ಪ್ಯಾಕ್ಸ್‌ಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಅವುಗಳಿಗೆ ಮಾದರಿ ಉಪ-ನಿಯಮಗಳನ್ನು ರಚಿಸಲಾಗುತ್ತಿದೆ.<br>• ರಾಷ್ಟ್ರವ್ಯಾಪಿ ಮ್ಯಾಪಿಂಗ್‌ಗಾಗಿ ರಾಷ್ಟ್ರೀಯ ಸಹಕಾರ ಡೇಟಾಬೇಸ್ ಸಿದ್ಧಪಡಿಸಲಾಗುತ್ತಿದೆ.<br>• ರೂ. 2516 ಕೋಟಿ ವೆಚ್ಚದಲ್ಲಿ 63,000 ಪ್ಯಾಕ್ಸ್‌ಗಳ ಗಣಕೀಕರಣವನ್ನು ಪ್ರಾರಂಭಿಸಲಾಗಿದೆ. |

2023–24 ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯ ಭಾಷಣದಲ್ಲಿ ಈ ಕೆಳಕಂಡ ಹೊಸ ಅಂಶಗಳನ್ನು ರೂಪಿಸಲಾಗಿದೆ.

**ಆದಾಯ ತೆರಿಗೆ ಪ್ರಯೋಜನಗಳು:–**

- 31 ಮಾರ್ಚ್ 2024 ರವರೆಗೆ ಉತ್ಪಾದನೆಯನ್ನು ಪ್ರಾರಂಭಿಸುವ ಹೊಸ ಸಹಕಾರಿಗಳು ಕಡಿಮೆ ತೆರಿಗೆ ದರ ಅಂದರೆ, ಶೇ.15ರ ದರದಲ್ಲಿ ಪ್ರಯೋಜನ ಪಡೆಯಲಿದ್ದಾರೆ (ಹೊಸ ಉತ್ಪಾದನಾ ಕಂಪನಿಗಳಿಗೆ ಅನ್ವಯಿಸುವ ಪ್ರಕರಣದಂತೆ) (ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 115 ಬಿಎಬಿ ಪ್ರಕಾರ)
- ನಗದು ಠೇವಣಿ ಮಾಡುವ ಮತ್ತು PACS/PCARDB ಮೂಲಕ ನಗದು ರೂಪದಲ್ಲಿ ಸಾಲ ಪಡೆಯುವ ಪ್ರತಿ ಸದಸ್ಯರಿಗೆ ಮೇಲಿನ ಮಿತಿಯನ್ನು ರೂ. 2,00,000/–ಗಳಿಗೆ ಹೆಚ್ಚಿಸಲಾಗಿದೆ (ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 269 ಎಸ್‌ಎಸ್ ಮತ್ತು 269 ಟಿ)
- ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ನಗದು ಹಿಂಪಡೆಯುವಿಕೆಯ ಮೇಲಿನ ಟಿಡಿಎಸ್ ಮೇಲ್ಮಿತಿಯನ್ನು ರೂ.3.00 ಕೋಟಿಗಳಿಗೆ ಹೆಚ್ಚಿಸಲಾಗಿದೆ (ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194 ಎನ್)

**ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಪರಿಹಾರ:–**

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ, ಮೌಲ್ಯಮಾಪನ ವರ್ಷ 2016–17ಕ್ಕಿಂತ ಮೊದಲು ಕಬ್ಬು ಬೆಳೆಗಾರರಿಗೆ ಪಾವತಿಸಲಾದ ಮೊತ್ತವನ್ನು "ವೆಚ್ಚ" ಎಂದು ಪರಿಗಣಿಸಲಾಗುವುದು. ಇದರಿಂದ, ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಅಂದಾಜು ರೂ. 10,000 ಕೋಟಿಗಳ ಪರಿಹಾರ ದೊರೆಯಲಿದೆ.

| | | |
|---|---|---|
| ಆ) | ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದ ಸಹಕಾರ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳೇನು ಹಾಗೂ ಇದರಿಂದ ರಾಜ್ಯದ ಜನತೆಗಾಗುವ ಉಪಯೋಗಗಳು ಯಾವುವು? | ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದ ಸಹಕಾರ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳು ಹಾಗೂ ಇದರಿಂದ ರಾಜ್ಯದ ಜನತೆಗಾಗುವ ಉಪಯೋಗಗಳ ವಿವರವನ್ನು ಈ ಕೆಳಕಂಡತೆ ನೀಡಲಾಗಿದೆ.<br><br>• **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆ:**<br><br>ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ರಾಜ್ಯದ 6040 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಪ್ರತಿ ಸಂಘಕ್ಕೆ ರೂ.3.91 ಲಕ್ಷಗಳಂತೆ ಒಟ್ಟು 236.00 ಕೋಟಿಗಳ ವೆಚ್ಚದಲ್ಲಿ ಗಣಕೀಕರಣಗೊಳಿಸಿ ರೈತರಿಗೆ ಮತ್ತು ಗ್ರಾಮೀಣ ಭಾಗದ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಉದ್ದೇಶಿಸಲಾಗಿದ್ದು, ಏಕರೂಪದ ತಂತ್ರಾಂಶ ಮತ್ತು ತರಬೇತಿಯ ಪೂರ್ಣ ವೆಚ್ಚ ರೂ.43.00 ಕೋಟಿಗಳನ್ನು ಕೇಂದ್ರ ಸರ್ಕಾರ ಮತ್ತು ನಬಾರ್ಡ್ ಭರಿಸಲಿದ್ದು, ಉಳಿದ ಮೊತ್ತ ರೂ.193.00 ಕೋಟಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ಪ್ರಮಾಣದಲ್ಲಿ ಭರಿಸಲಿದ್ದು, ರಾಜ್ಯ ಸರ್ಕಾರದ ಪಾಲು ರೂ.77.00 ಕೋಟಿಗಳಾಗಿರುತ್ತದೆ.<br>ಮೊದಲನೇ ಹಂತದಲ್ಲಿ 5491 ಪ್ಯಾಕ್ಸ್ ಗಳನ್ನು ಗಣಕೀಕರಣಗೊಳಿಸಲು ಕೇಂದ್ರ ಸರ್ಕಾರವು ಮೊದಲನೇ ಕಂತಿನಲ್ಲಿ ರೂ.25.45 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ.<br><br>• **National Cooperative data base ತಂತ್ರಾಂಶದಲ್ಲಿ ಸಹಕಾರ ಸಂಘಗಳ ಮಾಹಿತಿಯನ್ನು ಅಳವಡಿಸುವುದು:**<br>ಸಹಕಾರ ಮಂತ್ರಾಲಯ, ಕೇಂದ್ರ ಸರ್ಕಾರ 'ಸಹಕಾರ್ ಸೆ ಸಮೃದ್ಧಿ' ಧ್ಯೇಯದೊಂದಿಗೆ ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಇರುವ ತೊಡಕುಗಳನ್ನು ನಿವಾರಿಸಲು ಮತ್ತು ಸಾಮರ್ಥ್ಯವನ್ನು ಗುರುತಿಸಲು ಎಲ್ಲಾ ಸಹಕಾರ ಸಂಘಗಳ ಮಾಹಿತಿಯನ್ನು ಒಂದೆಡೆ ಕ್ರೋಢೀಕರಿಸಲು National Cooperative data base ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ಈ ತಂತ್ರಾಂಶದಲ್ಲಿ ಮೊದಲ ಹಂತದಲ್ಲಿ ರಾಜ್ಯದ 6040 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, 16,656 ಹಾಲು ಉತ್ಪಾದಕ ಸಹಕಾರ ಸಂಘಗಳು ಮತ್ತು 682 ಮೀನುಗಾರಿಕೆ ಸಹಕಾರ ಸಂಘಗಳ ಮಾಹಿತಿಯನ್ನು ಅಳವಡಿಸಲಾಗುತ್ತಿದೆ.<br><br>• **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮಾಡೆಲ್ ಬೈಲಾ ಒದಗಿಸುವುದು:**<br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬಹುಪಯೋಗಿ ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ಗ್ರಾಮೀಣ ಭಾಗದ ಸದಸ್ಯರಿಗೆ ಎಲ್ಲಾ ಬಗೆಯ |

| | | |
|---|---|---|
| | | ಸೇವೆಗಳನ್ನು ಒದಗಿಸಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರವು ಮಾದರಿ ಬೈಲಾವನ್ನು ಒದಗಿಸಿದ್ದು, ರಾಜ್ಯದಲ್ಲಿನ ಸಹಕಾರ ಕಾಯ್ದೆಯಲ್ಲಿನ ಅಂಶಗಳನ್ನು ಇದಕ್ಕೆ ಸೇರ್ಪಡೆ ಮಾಡಿ ಪ್ಯಾಕ್ಸ್‌ಗಳ ಬೈಲಾಗೆ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.<br><br>**ಆತ್ಮ ನಿರ್ಭರ್‌ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹುಪಯೋಗಿ ಸೇವಾ ಕೇಂದ್ರಗಳನ್ನಾಗಿ ಪರಿವರ್ತನೆ:**<br><br>ನಬಾರ್ಡ್‌ನ ಯೋಜನೆಯಡಿ ಪ್ಯಾಕ್ಸ್‌ಗಳನ್ನು ಬಹುಪಯೋಗಿ ಕೇಂದ್ರಗಳನ್ನಾಗಿ ಪರಿವರ್ತಿಸಲು ಶೇ.4 ರ ಬಡ್ಡಿ ದರದಲ್ಲಿ ಪುನರ್ಧನ ನೀಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಆತ್ಮ ನಿರ್ಭರ್ ಯೋಜನೆಯ ಭಾಗವಾದ Agri Infra Fund ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಜಮೀನಿನ ಸಮೀಪ ಕೊಯ್ಲೋತ್ತರ ಸಂಸ್ಕರಣೆಗಾಗಿ ಘಟಕಗಳನ್ನು ಸ್ಥಾಪಿಸಲು ಉದಾ: ಗೋದಾಮು ನಿರ್ಮಾಣ, ಶೀತಲಗೃಹ ನಿರ್ಮಾಣ, ಕೊಯ್ಲೋತ್ತರ ಸಂಸ್ಕರಣೆ, ರೈತರ ಸೇವಾ ಕೇಂದ್ರ, ಕೃಷಿ ಪರಿಕರಗಳನ್ನು ಸರಬರಾಜು ಮಾಡುವ, ಸಾಗಾಣಿಕೆಗೆ ಸೌಕರ್ಯ ಕಲ್ಪಿಸುವ ಸಲುವಾಗಿ ಸಾಲ ನೀಡಿದ್ದಲ್ಲಿ ಶೇ.3 ರ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.<br>ಕರ್ನಾಟಕ ರಾಜ್ಯದಲ್ಲಿ ಈ ಎರಡೂ ಯೋಜನೆಗಳನ್ನು ಸಂಯೋಜಿಸಿ 1549 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಯೋಜನೆ ಲಾಭ ಪಡೆಯಲು ಗುರಿ ನಿಗದಿಪಡಿಸಿದ್ದು, ಇದುವರೆಗೆ 1043 ಪ್ಯಾಕ್ಸ್‌ಗಳು ಅರ್ಜಿ ಸಲ್ಲಿಸಿದ್ದು, ನಬಾರ್ಡ್ 873 ಸಂಘಗಳಿಗೆ ರೂ.302.31 ಕೋಟಿಗಳ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ಮಂಜೂರು ಮಾಡಿದ್ದು, ಈ ಪೈಕಿ 706 ಸಂಘಗಳಿಗೆ ರೂ.158.00 ಕೋಟಿಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಬಿಡುಗಡೆ ಮಾಡಿವೆ. |

**ಸಂಖ್ಯೆ: ಸಿಒ 31 ಸಿಎಲ್‌ಎಸ್ 2023**

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**